1969ರೊಳಗ ಆಲಮಟ್ಟಿ ಹತ್ರ ಆಣೆಕಟ್ಟ ಕಟ್ಟಾಕ ಪಾಯ ಹಾಕಿದ್ರೂ ಅಲ್ಲಿಂದ ಇಲ್ಲಿತಂಕ ಜಿಲ್ಲಾ ಎರಡ ಆದ್ರೂ ಬಾಗಲಕೋಟ ನಗರ ಮತ್ತ ಸುತ್ತಮುತ್ತಲಿನ ಎಷ್ಟ ಹಳ್ಳಿಗೊಳು ಮುಳಗಡಿ ಆಗ್ಯಾವ. ಅದರ ಪುನರವಸತಿ ದಗದ ಇನ್ನ ನಡದೈತಿ. ಹಂಗ ಬಾಗಲಕೋಟಿಗೆ ನೀವ ಒಮ್ಮಿ ಬಂದ ಕಾಲಿಟ್ರ ನಿಮಗ ಎಲ್ಲಿ ನೋಡದ್ರಲ್ಲಿ ಬರೀ ನೀರ... ಹಿನ್ನೀರ ಕಾಣತೈತಿ.

ಜಿಲ್ಲಾ ಬ್ಯಾರೆ ಬ್ಯಾರೆ ಆಗಿ ಮೂವತ್ತ ವರ್ಷ ಆಗಾಕ ಬಂದ್ರೂ ವಿಜಾಪುರ ಮತ್ತ ಬಾಗಲಕೋಟ ಎರಡು ಜಿಲ್ಲಾ ನಡಬಾರಕ ಹೊಕ್ಕಳ ಬಳ್ಳಿ ಸಂಬಂಧ ಮೊದಲಿನಂಗ ಐತಿ. ಮಗ್ಗಲ ಜಿಲ್ಲಾಗೋಳ ಹೊಲಕ ನೀರ ಉಣಸಾಕ ಅಲಮಟ್ಟಿ ಡ್ಯಾಂ ಕಟ್ಟಿದಾಗ ಹಿನ್ನೀರಿನಿಂದ ಛಲೋ ಭೂಮಿ ಕಳಕೊಂಡ್ರು. ಬ್ಯಾರೆ ಜಿಲ್ಲಾದ ಅಣ್ತಮ್ಮರ ಭೂಮಿ ನೀರಾವರಿಯಿಂದ ಹಸಿರಿನಿಂದ ನಳನಳಿಸಿಕೊತ ನಿಂತಿದ್ದ ನೋಡಿ ಖುಷಿಪಡೂ ಜನ ಬಾಗಲಕೋಟಿಯವ್ರು. ಜೊತಿಗಿ ಎಷ್ಟೋ ವರ್ಷಗಳ ನಮ್ಮ ಮನಿ, ಹೊಲಗಳ ನಡವಿನ ಬಾಂಧವ್ಯನ ಬಿಟ್ಟು ಬ್ಯಾರೆ ಕಡೆ ಬಂದ ನೆಲಿಸಿವಿ. ಅದಕ ಬಾಗಲಕೋಟ ಮಂದಿ ತ್ಯಾಗ, ಬಲಿದಾನ ದೊಡ್ಡದೈತಿ. ಇಷ್ಟೆಲ್ಲಾ ಭೂಮಿ ಕಳಕೊಂಡ್ರು ಈಗ ಜಿಲ್ಲಾದಾಗ ಹರಿಯೋ ನದಿ, ಬೋರವೆಲ್‌ದಿಂದ ನೀರಾವರಿ ಆಗೈತಿ. ಬಹಳ ತಾಲೂಕಿನ್ಯಾಗ ತೋಟಗಾರಿಕಾ ಬೆಳಿನ ಐತಿ. ಚಿಕ್ಕು, ಪೇರಲ, ದಾಳಿಂಬೆ, ದ್ರಾಕ್ಷಿ ಅಂತ ಹಣ್ಣು ಬೆಳಿಯೋ ಪ್ರದೇಶ ಹೆಚ್ಚ ಆಗೇದ. ಯಾಕಂದ್ರ ನಾವ ಸಣ್ಣಾವ್ರ ಇದ್ದಾಗ ವಿಳ್ಳೆದೆಲೆ, ಶೇಂಗಾ, ಸೂರ್ಯಪಾನ, ಉಳ್ಳಾಗಡ್ಡಿ, ಅರಿಷಣ ಬಹಳ ಬೆಳಿತಿತ್ತ. ಆದ್ರ ಈಗ ಹಣ್ಣಿನ ಬೆಳಿ ಮತ್ತ ಹೆಚ್ಚಿನ ಕಡೆ ಕಡೆ ಕಬ್ಬು ಮುಖ್ಯ ಬೆಳಿ ಆಗೆದ. ಹಿಂಗಾಗಿ ಜಿಲ್ಲಾದಾಗ ಬಹಳಷ್ಟು ಸಕ್ಕರಿ ಕಾರ್ಖಾನಿಗಳು ಸ್ಥಾಪನಾ ಆಗ್ಯಾವ. ಹಂಗ ತೋಟಗಾರಿಕಾ ಬೆಳಿ ಮಸ್ತ ಆಗತೈತಂತ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯನೂ ಆಗೇತಿ.

ನಾವ ಹಿಂದಕ ಪಿಯುಸಿ, ಡಿಗ್ರಿ ಕಲಿಯೋ ವ್ಯಾಳೆದಾಗ ಸರಕಾರಿ ಹಾಸ್ಟೇಲದಾಗ ಇದ್ದ ಓದಿದವ್ರು. ಹಳೇ ಬಾಗಲಕೋಟದ ಎಪಿಎಮ್ಸಿ ಹತ್ರ ಇದ್ದ ರೂಮಿನಿಂದ ಊಟಾ ಮಾಡಾಕ ನಗರವನ ಆಚಿಕ ಇದ್ದ ವಸತಿನಿಲಯಕ ಹೋಗಿ ಊಟ ಮಾಡಿ ಬರತಿದ್ದಿವಿ. ಆದ್ರ ಅಷ್ಟ ವರ್ಷ ನಮಗ ಊಟ ಹಾಕಿದ ಆ ವಸತಿನಿಲಯ ಈಗ ಮುಳಗಡಿ ಆಗೇತಿ. ಈಗ ಇಲ್ಲೆ ಕೆಲಸ ಮಾಡಾಕ ಇರೋದಿಂದ್ರ ವಾಹನದಾಗ ಅಡ್ಡಾಡೋ ಮುಂದ ಊಟ ಮಾಡಿದ ಜಾಗದ ನೆನಪ ಬ್ಹಾಳ ಬರತೈತಿ. ಎಲ್ಲಾರಿಗೂ ಬಾಗಲಕೋಟ ಅಂದ್ರ ನೆನಪಿಗೆ ಬರೋದ ಹೋಳಿ ಹಬ್ಬ. ಕಾಲೇಜ ದಿನದಾಗಂತೂ ಹಾಸ್ಟೇಲಾದಾಗ ಇದ್ದಾಗ ಬ್ಯಾರೆ ಬ್ಯಾರೆ ಓಣ್ಯಾಗ ಆಡತ್ತಿದ್ದ ಬಣ್ಣ, ಸೋಗಿನ ಬಂಡಿಗಳ ಜೊತಿ ಓಣಿ ಓಣಿ ಅಡ್ಡಾಡಕೊತ ಬಣ್ಣ ಆಡೋದ ಬಾಳ ಖುಷಿಕೊಡತಿತ್ತ. ಲಬೋ ಲಬೋ ಅಂತ ಹೊಯ್ಕೊಂಡ ಅಡ್ಡಾಡತಿದ್ರ ಅದರ ಮಜಾ ಏನಂತಿರಿ. ಇಡೀ ಊರೆಂಬೋ ಊರ ಬಣ್ಣದಾಗ ಮುಳಗೇಳತಿತ್ತ. ಹೆಣ್ಮಕ್ಕಳ, ಗಂಡ್ಮಕ್ಕಳ ಅನ್ನದನ ಆ ಹೋಳಿ ಆಡೋದು ಬಾಳ ಚಂದ ಇರತಿತ್ತ.

ಮುಳುಗಡಿ ಆಗಿರೋ ಬಾಗಲಕೋಟಿ ಪಟ್ಣ ಇಂದು ಮೂರು ಭಾಗದಾಗ ಹರಿದು ಹಂಚಿ ಹೋಗೈತಿ. ಹಳೇ ಬಾಗಲಕೋಟ್ಯಾಗ ಇನ್ನೂ ಜನ್ರು ಅದಾರ. ಹಂಗ ವಿದ್ಯಾಗಿರಿ ಪ್ರದೇಶ ಬ್ಹಾಳ ಬೆಳದೈತಿ. ಮುಳುಗಡಿ ಆದ ಜನಕ ಪುನರವಸತಿಗಾಗಿ ನವ ನಗರ ನಿರ್ಮಾಣ ಆಗೈತಿ. ಇಗಾಗ್ಲೆ ಯುನಿಟ್ 1, ಯುನಿಟ್ 2 ಅಂತ ಸೃಷ್ಟಿ ಆಗಿ ಅಲ್ಲಿ ಮನಿನೂ ಆಗ್ಯಾವ. ಈಗ ಮೂರನೇ ಯುನಿಟ್ ರಚನಾ ಮಾಡೂ ಕೆಲಸ ನಡದೈತಿ. ಹಂಗ ಜಿಲ್ಲಾದಾಗ ಅನೇಕ ಹಳ್ಳಿಗೋಳ ಮುಳುಗಡಿ ಆಗಿರೋದಿಂದ ಅಲ್ಲಿ ಮನಿ, ಜಮೀನ ಕಳಕೊಂಡರಿಗೆ ಪುನರವಸತಿ ಕೇಂದ್ರಗಳು ಆಗ್ಯಾವ. ಬ್ಹಾಳ ಕಡೆ ಮೂರು ನಾಲ್ಕು ಹಳ್ಳಿಗೊಳು ಒಂದ ಕಡೆನ ಸ್ಥಳಾಂತರ ಆಗಿರೋದರಿಂದ ಭಿನ್ನ ಸಂಸ್ಕೃತಿ ಬೆಸಿಯಾಕ ಕಾರಣ ಆಗ್ಯಾವ. ಹಂಗ ಬ್ರಿಟಿಷರ ಕಾಲದಾಗ ಜಿಲ್ಲಾ ಕೇಂದ್ರ ಆಗಿದ್ದ ಕಲಾದಗಿ ಊರು ಮುಳುಗಡಿ ಆಗೈತಿ. ಅಲ್ಲಿ ಬಹಳಷ್ಟ ಮುಸ್ಲಿಂ ಬಂಧುಗಳ ಇದ್ದು ಅವ್ರು ಬ್ಯಾರೆ ಬ್ಯಾರೆ ಉದ್ಯೋಗ ನಡಿಸ್ತಾರ. ಅವರ ಆಡೂ ಕನ್ನಡದ ಸೊಗಸ ಬ್ಯಾರೆ. ಆ ಊರ ಸುತ್ತಮುತ್ತ ಬರೀ ಚಿಕ್ಕು, ದಾಳಿಂಬೆ, ಪೇರಲದಂತಹ ಹಣ್ಣ ಬೆಳಿಯೋದರಿಂದ ಅವುಗಳು ಬ್ಯಾರೆ ದೇಶಕ, ಬ್ಯಾರೆ ರಾಜ್ಯಕ್ಕೂ ಹೋಗ್ತಾವು.

ನಮ್ಮ ಊರ ಸಾಹಿತ್ಯಕ, ರಂಗಭೂಮಿಗೆ ಎಷ್ಟ ಹೆಸರ ಪಡದೈತಿ ಅನ್ನೂದು ಎಲ್ರಿಗೂ ತಿಳಿದಿರೋ ಮಜಕೂರನ ಐತಿ. ರನ್ನನ ಊರ ಬೆಳಗಲಿ ಇಲ್ಲಿ ಇರೂದು. ಆ ಮ್ಯಾಲೆ ಕೃಷ್ಣಮೂರ್ತಿ ಪುರಾಣಿಕ, ಸತ್ಯಕಾಮ ಸೈತ ಇಲ್ಲಿಯವ್ರ ಅನ್ನೂದು ಹೆಮ್ಮೆ ಅನಸ್ತದ. ಹಂಗ ಕಂದಗಲ್ಲ ಹಣಮಂತರಾಯರು, ಪಿ.ಬಿ.ದುತ್ತರಗಿ ಅವರು ಕನ್ನಡ ರಂಗಭೂಮಿಗೆ ಎಷ್ಟ ಕೊಡುಗೆ ನೀಡ್ಯಾರ. ಶ್ರೀಕೃಷ್ಣ ಪಾರಿಜಾತದ ನೆಲೆವೀಡು ನಮ್ಮೂರಂದ್ರ ತಪ್ಪಲ್ಲ.

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ ‘ಚೆನ್ನುಡಿ’ ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್–
**editorsu@sudha.co.in**

## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.


ಬಾಗಲಕೋಟ ಹಿನ್ನೀರಿನ ಒಂದು ನೋಟ